ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು

ADIKAVI SRI MAHARSHI VALMIKI UNIVERSITY, RAICHUR

Krishna Tunga Campus, Mantralay Road (N.H. 167), Yergera -584133, Raichur, Karnataka

ಪರೀಕ್ಷಾ ವಿಭಾಗ

Email: registrarevrur@gmail.com

ಕ್ರ.ಸಂ.ರಾವಿರಾ/ಪರೀಕ್ಷೆ/PG-I&III/2026-27/782 ದಿನಾಂಕ: 18/11/2026

ಪರೀಕ್ಷಾ ಅಧಿಸೂಚನೆ

ವಿಷಯ: 2026-27ನೇ ಸಾಲಿನ ಸ್ನಾತಕೋತ್ತರ (PG) ಪ್ರಥಮ ಮತ್ತು ತೃತೀಯ (ರೆಗ್ಯುಲರ್/ರಿಪೀಟರ್ಸ್) (Revised/New CBCS) ಸೆಮಿಸ್ಟರ್‌ನ ಹಾಗೂ ಸ್ನಾತಕೋತ್ತರ ಡಿಪ್ಲೋಮ್ (PG Diploma) ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:-13.11.2026

*****

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಜನವರಿ-2027ರಲ್ಲಿ ಜರುಗಲಿರುವ ಎಮ್.ಎ., ಎಮ್.ಎಸ್ಸಿ., ಎಮ್.ಕಾಂ., ಎಮ್.ಎಲ್.ಐ.ಸಿ, ಎಮ್.ಜೆ.ಎಮ್.ಸಿ, ಎಮ್.ಎಸ್.ಡಬ್ಲೂ(M.A., M.Sc.,M.Com., MJMC, M.Li.Sc.,MSW) ಹಾಗೂ ಸ್ನಾತಕೋತ್ತರ ಡಿಪ್ಲೋಮ್(PG Diploma) ಕೋರ್ಸ್‌ಗಳ ಪರೀಕ್ಷಾ ಅಧಿಸೂಚನೆಗೆ ಸಂಬಂಧಿಸಿದಂತೆ 2026-27ನೇ ಸಾಲಿನ ಸ್ನಾತಕೋತ್ತರ(PG) ಪ್ರಥಮ ಮತ್ತು ತೃತೀಯ (ರೆಗ್ಯುಲರ್/ರಿಪೀಟರ್ಸ್) ಸೆಮಿಸ್ಟರ್‌ನ ಹಾಗೂ ಸ್ನಾತಕೋತ್ತರ ಡಿಪ್ಲೋಮ್(PG Diploma) ಪರೀಕ್ಷೆಗಳಿಗೆ UUCMS ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು ದಿನಾಂಕಗಳನ್ನು ನಿಗದಿಪಡಿಸಿ ಈ ಅಧಿಸೂಚನೆ ಹೊರಡಿಸಲಾಗಿದೆ.

ಪರೀಕ್ಷಾ ಶುಲ್ಕ, ಅಂಕಪಟ್ಟಿ ಶುಲ್ಕ, ಅರ್ಜಿತಪಾಸಣಾ ಶುಲ್ಕ ಹಾಗೂ ಇನ್ನಿತರ ಶುಲ್ಕಗಳ ವಿವರಗಳು

ಕ್ರ.ಸಂ.	ವಿವರಗಳು	For All P.G and P.G Diploma Courses with Practical & Without Practical
1.	ಪರೀಕ್ಷಾ ಶುಲ್ಕ (Without Practical)	ರೂ. 1320.00
2.	ಪರೀಕ್ಷಾ ಶುಲ್ಕ (With Practical)	ರೂ. 1760.00
3.	ಅರ್ಜಿತಪಾಸಣೆ ಶುಲ್ಕ	ರೂ. 10.00
4.	ಅರ್ಜಿಗಳ ಸಂಸ್ಕರಣಾ ಶುಲ್ಕ	ರೂ. 150.00

ರಿಪೀಟರ್ಸ್ ಪರೀಕ್ಷಾ ಶುಲ್ಕ, ಅಂಕಪಟ್ಟಿ ಶುಲ್ಕ, ಅರ್ಜಿ ತಪಾಸಣಾ ಶುಲ್ಕ ಹಾಗೂ ಇನ್ನಿತರ ಶುಲ್ಕಗಳ ವಿವರಗಳು

ಕ್ರ.ಸಂ.	ವಿವರಗಳು	I& III Semester
1	ಅರ್ಜಿ ತಪಾಸಣೆ ಶುಲ್ಕ	ರೂ.150.00
2	ಪ್ರತಿ ಪತ್ರಿಕೆಗೆ(Without Practical)	ರೂ.300.00
3	ಪ್ರತಿ ಪತ್ರಿಕೆಗೆ(With Practical)	ರೂ.500.00
4	ಮೂರು ಅಥವಾ ಮೂರಕ್ಕಿಂತ ಹೆಚ್ಚು ಪತ್ರಿಕೆಗಳಿಗೆ (ಪೂರ್ಣ ಶುಲ್ಕ)	ರೂ.1320.00 (Without Practical) ರೂ.1760.00 (With Practical)

ಪರೀಕ್ಷಾ ಶುಲ್ಕ ಮತ್ತು ಇನ್ನಿತರ ಶುಲ್ಕಗಳ ದಿನಾಂಕಗಳ ವಿವರಗಳು

ಕ್ರ.ಸಂ.	ವಿವರಗಳು	ದಿನಾಂಕ
1.	UUCMSನಲ್ಲಿ I and IIIಸೆಮಿಸ್ಟರ್ ಕೋರ್ಸ ರೆಜಿಸ್ಟ್ರೇಷನ್ (Course Registration) ಮಾಡಿಕೋಳ್ಳುವ ಕೊನೆಯ ದಿನಾಂಕ	20.11.2026
2.	UUCMನಲ್ಲಿ ಪ್ರಾಂಶುಪಾಲರುಗಳು/ಮುಖ್ಯಸ್ಥರು/ಸಂಯೋಜಕರು ಕೋರ್ಸ ರೆಜಿಸ್ಟ್ರೇಷನ್ (Course Registration) approve ಮಾಡುವ ಕೊನೆಯ ದಿನಾಂಕ	21.11.2026
3.	ವಿದ್ಯಾರ್ಥಿಗಳು UUCMS ಪೋರ್ಟಲ್‌ನಲ್ಲಿ ಪರೀಕ್ಷಾ ಶುಲ್ಕದೊಂದಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ (ದಂಡರಹಿತ)	19.12.2026
4.	ವಿದ್ಯಾರ್ಥಿಗಳು UUCMS ಪೋರ್ಟಲ್‌ನಲ್ಲಿ ಪರೀಕ್ಷಾಶುಲ್ಕದೊಂದಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ (ದಂಡ ಸಹಿತರೂ. 100/–)	21.12.2026
5.	ವಿದ್ಯಾರ್ಥಿಗಳು UUCMS ಪೋರ್ಟಲ್‌ನಲ್ಲಿ ಪರೀಕ್ಷಾ ಶುಲ್ಕದೊಂದಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ (ದಂಡ ಸಹಿತರೂ. 750/–)	23.12.2026
6.	ಮುಖ್ಯಸ್ಥರು/ಪ್ರಾಂಶುಪಾಲರುಗಳು/ಸಂಯೋಜಕರು ಪರೀಕ್ಷಾ ಶುಲ್ಕ, ದಂಡ ಶುಲ್ಕದೊಂದಿಗೆ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳ ಮಾಹಿತಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಕೊನೆಯ ದಿನಾಂಕ	24.12.2026
7.	ಮುಖ್ಯಸ್ಥರು/ಪ್ರಾಂಶುಪಾಲರುಗಳು/ಸಂಯೋಜಕರು ಪರೀಕ್ಷಾ ಶುಲ್ಕ, ದಂಡ ಶುಲ್ಕದೊಂದಿಗೆ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳ ಮಾಹಿತಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ (ಪ್ರತಿ ದಿನ ದಂಡ ಸಹಿತ ರೂ.500 ರೊಂದಿಗೆ) ಸಲ್ಲಿಸುವ ಕೊನೆಯ ದಿನಾಂಕ	26.12.2026
8.	ಪರೀಕ್ಷಾ ಪ್ರವೇಶ ಪತ್ರಗಳನ್ನು (**Hall Ticket**) **UUCMS** ಮೂಲಕ ಪಡೆಯುವ ದಿನಾಂಕ	29.12.2026
9.	ಪ್ರಾಯೋಗಿಕ ಪರೀಕ್ಷಾ ದಿನಾಂಕ	20.01.2027
10.	ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ	02.01.2027– 20.01.2027
11.	ಆಂತರಿಕ ಅಂಕಗಳನ್ನು ಸಲ್ಲಿಸುವಕೊನೆಯ ದಿನಾಂಕ	26.12.2026

+

ವಿದ್ಯಾರ್ಥಿಗಳು ಶಿಷ್ಯಾವೇತನಕ್ಕೆ ಅರ್ಜಿ ಸಲ್ಲಿಸಿದಲ್ಲಿ ಮಾತ್ರ ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿಗೆ ಅರ್ಹರಾಗಿರುತ್ತಾರೆ ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ಪಡೆಯುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ –1, ಪ್ರವರ್ಗ–2(ಎ), ಪ್ರವರ್ಗ–2(ಬಿ), ಪ್ರವರ್ಗ–3(ಎ), ಪ್ರವರ್ಗ3(ಬಿ) ಸೇರಿದ ವಿದ್ಯಾರ್ಥಿಗಳು ಈ ಕೆಳಕಾಣಿಸಿದ ಶುಲ್ಕ ಭರಿಸತಕ್ಕದ್ದು.

ಕ್ರ.ಸಂ.	ವಿವರಗಳು	ಪರೀಕ್ಷಾ ಶುಲ್ಕ
1	ಅರ್ಜಿತಪಾಸಣೆ ಶುಲ್ಕ	ರೂ. 10.00
2	ಕಂಪ್ಯೂಟರೀಕರಣ ಶುಲ್ಕ	ರೂ. 150.00
ಒಟ್ಟು ಮೊತ್ತ		ರೂ. 160.00

ವಿದ್ಯಾರ್ಥಿಗಳಿಗೆ ಸೂಚನೆಗಳು:

1. ವಿದ್ಯಾರ್ಥಿಯು ಒಮ್ಮೆ ನೋಂದಣಿ ಮಾಡಲು ಮೊಬೈಲ್ ನಂಬರ್ ಹಾಗೂ ಇ-ಮೇಲ್ ನ್ನು ಬೇರೆ ವಿದ್ಯಾರ್ಥಿಗಳು ಬಳಸುವಂತಿಲ್ಲ.
2. ಪ್ರತಿಯೊಬ್ಬ ವಿದ್ಯಾರ್ಥಿಯು ಪರೀಕ್ಷಾ ಶುಲ್ಕವನ್ನು ಕಡ್ಡಾಯವಾಗಿ UUCMS ಪೋರ್ಟಲ್ ಮೂಲಕವೇ ಪರೀಕ್ಷಾ ಶುಲ್ಕವನ್ನು ಆನ್‌ಲೈನ್‌ನಲ್ಲಿ ಪಾವತಿಸತಕ್ಕದ್ದು.
3. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಆನ್‌ಲೈನ್ ಮೂಲಕ ಭರಿಸಿದ ಶುಲ್ಕದ ರಸೀದಿಯೊಂದಿಗೆ/ಚಲನ್ ದೊಂದಿಗೆ ಪರೀಕ್ಷಾ ಅರ್ಜಿಗಳನ್ನು ಕಾಲೇಜಿನಲ್ಲಿ ಸಲ್ಲಿಸತಕ್ಕದ್ದು.
4. ಪರೀಕ್ಷಾಕೇಂದ್ರದ ಬದಲಾವಣೆಗೆ ಯಾವುದೇ ಕಾರಣಕ್ಕೂ ಅವಕಾಶ ವಿರುವುದಿಲ್ಲ.
5. **ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ -1, ಪ್ರವರ್ಗ-2 (ಎ), ಪ್ರವರ್ಗ-2(ಬಿ), ಪ್ರವರ್ಗ-3 (ಎ), ಪ್ರವರ್ಗ-3(ಬಿ) ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು, ಸರ್ಕಾರ ನಿಗಧಿಪಡಿಸಿದ ಆದಾಯದ ಮಿತಿಯೊಳಗೆ ಇದ್ದಲ್ಲಿ & ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಿದಲ್ಲಿ ಮಾತ್ರ ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ಅರ್ಹರಾಗಿರುತ್ತಾರೆ**
6. ಒಮ್ಮೆ ಪಾವತಿಸಲಾದ ಪರೀಕ್ಷಾ ಶುಲ್ಕವನ್ನು ಯಾವ ಕಾರಣಕ್ಕೂ ಮರುಪಾವತಿ ಮಾಡಲಾಗುವುದಿಲ್ಲ ಹಾಗೂ ಅದನ್ನು ಮುಂದಿನ ಪರೀಕ್ಷೆಗಳಿಗೆ ಸರಿದೂಗಿಸಿಕೊಳ್ಳಲಾಗುವುದಿಲ್ಲ ಮತ್ತು ಇಂತಹ ವಿಷಯಗಳಿಗೆ ಪತ್ರ ವ್ಯವಹಾರಕ್ಕೆ ಆಸ್ಪದವಿರುವುದಿಲ್ಲ.
7. ಯಾವುದೇ ಪರಿಸ್ಥಿತಿಯಲ್ಲಿ ಅಧಿಸೂಚನೆಯಲ್ಲಿ ನಿಗಧಿಪಡಿಸಿ ತಿಳಿಸಿದ ಕೊನೆಯ ದಿನಾಂಕ ಮುಗಿದ ನಂತರ ಬಂದಂತಹ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಯಾವುದೇ ಕಾರಣಕ್ಕಾಗಿ ಪರೀಕ್ಷೆಗಳು ಮುಂದೂಡಿದಲ್ಲಿ ಶುಲ್ಕ ಪಾವತಿಸುವ ದಿನಾಂಕಗಳು ಬದಲಾವಣೆಯಾಗುವುದಿಲ್ಲ.

ಪ್ರಾಂಶುಪಾಲರುಗಳಿಗೆ ಸೂಚನೆಗಳು:

1) ಜನವರಿ-2027 ಪರೀಕ್ಷಾ ಅರ್ಜಿಗಳನ್ನು ಆನ್‌ಲೈನ್ ಮೂಲಕ ಪಡೆಯಬಹುದಾಗಿದ್ದು, ಹಾಗೂ ಸದರಿ ಚಲನ್‌ಗಳನ್ನು ವಿದ್ಯಾರ್ಥಿಗಳ ಪಟ್ಟಿಯೊಂದಿಗೆ ಪರೀಕ್ಷಾ ವಿಭಾಗಕ್ಕೆ ಸಲ್ಲಿಸಬೇಕು. ಯಾವುದೇ ಕಾರಣಕ್ಕೂ ಪರೀಕ್ಷಾ ವಿಭಾಗದಿಂದ ಮ್ಯಾನುವಲ್ ಪರೀಕ್ಷಾ ಅರ್ಜಿಗಳನ್ನು ನೀಡುವುದಿಲ್ಲ.

2) **ಪ್ರಾಂಶುಪಾಲರುಗಳು** ಆಯಾಕಾಲೇಜಿನ ಎಲ್ಲಾ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು **ಕಡ್ಡಾಯವಾಗಿ UUCMS ಪೋರ್ಟಲ್ ಮೂಲಕವೆ ಪರೀಕ್ಷಾ ಶುಲ್ಕವನ್ನು ಪಾವತಿಸುವಂತೆ ಕ್ರಮಕೈಗೊಳ್ಳಬೇಕು.**

3) ಪ್ರಾಂಶುಪಾಲರುಗಳು ಆನ್‌ಲೈನ ಮೂಲಕ ಭರಿಸಿದ ಶುಲ್ಕದ ರಸೀದಿಯೊಂದಿಗೆ/ಚಲನ್‌ದೊಂದಿಗೆ ಪರೀಕ್ಷಾ ಅರ್ಜಿಗಳ ಮಾಹಿತಿ (ವಿದ್ಯಾರ್ಥಿಗಳ ಪಟ್ಟಿ)ಯನ್ನು ಪರೀಕ್ಷಾ ವಿಭಾಗಕ್ಕೆ **24.12.2026**ರೊಳಗಾಗಿ ಸಲ್ಲಿಸತಕ್ಕದು. ತಪ್ಪಿದಲ್ಲಿ ಪ್ರತಿ ದಿನ ರೂ. 500/- ದಂಡ ವಿಧಿಸಲಾಗುವುದು.

4) **All P.G and P.G Diploma Courses** ಪ್ರಥಮ(ರೆಗ್ಯುಲರ್ಸ್) ಹಾಗೂ ಸ್ನಾತಕೋತ್ತರ ಡಿಪ್ಲೋಮ್(PG Diploma)ಸೆಮಿಸ್ಟರ್ ಪರೀಕ್ಷೆಗಳಿಗೆ ಹಾಜರಾಗುವ ವಿಷಯವಾರು ಅಭ್ಯರ್ಥಿಗಳ ಸಂಖ್ಯೆ ತೋರಿಸುವ ಪಟ್ಟಿಯನ್ನು ಲಗತ್ತಿಸಬೇಕು.

5) ಅಂಕಪಟ್ಟಿಗಳ ಪ್ರತಿಗಳನ್ನು ಆಯಾ ಮಹಾವಿದ್ಯಾಲಯ ಪ್ರಾಂಶುಪಾಲರೇ ದೃಢೀಕರಿಸಬೇಕು. ವಿನಾಯತಿ **(Exemption)** ಪಡೆಯುವ ಬಗ್ಗೆ ದೃಢೀಕರಿಸಲ್ಪಟ್ಟ ಝರಾಕ್ಸ್ ಪ್ರತಿಗಳನ್ನು ಲಗತ್ತಿಸಬೇಕು.

6) ಪ್ರಾಂಶುಪಾಲರುಗಳು ವಿಶ್ವವಿದ್ಯಾಲಯಕ್ಕೆ ಪರೀಕ್ಷಾ ಅರ್ಜಿಗಳ ಮಾಹಿತಿಯನ್ನು ಕಳುಹಿಸುವ ಮೊದಲು ಅವುಗಳನ್ನು ಕೂಲಂಕುಶವಾಗಿ ಪರಿಶೀಲಿಸಬೇಕು.

7) **ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ಪಡೆಯುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ -1, ಪ್ರವರ್ಗ-2(ಎ), ಪ್ರವರ್ಗ-2(ಬಿ), ಪ್ರವರ್ಗ-3 (ಎ), ಪ್ರವರ್ಗ-3(ಬಿ) ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ಅರ್ಜಿತಪಾಸಣೆ ಶುಲ್ಕ ರೂ. 10/- ಪರೀಕ್ಷಾ ಕಂಪ್ಯೂಟರೀಕರಣ ಶುಲ್ಕ ರೂ. 150/- ಒಟ್ಟು ರೂ. 160/- ಪಾವತಿ ಮಾಡಬೇಕಾಗುತ್ತದೆ.**

8) **ಪ್ರಾಂಶುಪಾಲರುಗಳು ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ಪಡೆಯುವ ವಿದ್ಯಾರ್ಥಿಗಳ ಶಿಷ್ಯವೇತನ ಅರ್ಜಿಗಳನ್ನು ಕಡ್ಡಾಯವಾಗಿ ಸಂಬಂಧಪಟ್ಟ ಇಲಾಖೆಗಳಿಗೆ ಸಲ್ಲಿಸುವ ವ್ಯವಸ್ಥೆ ಮಾಡುವುದು. ಪ್ರಾಂಶುಪಾಲರುಗಳು ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಸಮಾಜಕಲ್ಯಾಣ ಇಲಾಖೆಯಿಂದ/ಹಿಂದುಳಿದ ವರ್ಗ & ಅಲ್ಪಸಂಖ್ಯಾತ ಇಲಾಖೆಯಿಂದ ಪಡೆದಂತಹ ವಿದ್ಯಾರ್ಥಿಗಳ ಶಿಷ್ಯವೇತನ ನೇರವಾಗಿ ವಿದ್ಯಾರ್ಥಿಗಳ ಖಾತೆಗೆ ಜಮವಾಗಿರುತ್ತದೆ ಹಾಗೂ ಅಂತಹ ವಿದ್ಯಾರ್ಥಿಗಳ ವ್ಯತ್ಯಾಸದ ಪರೀಕ್ಷಾ ಶುಲ್ಕವನ್ನು ವಿದ್ಯಾರ್ಥಿಗಳಿಂದ ಪಡೆದು ಆಯಾಕಾಲೇಜಿನ ಪ್ರಾಂಶುಪಾಲರುಗಳು ವಿಶ್ವವಿದ್ಯಾಲಯಕ್ಕೆ ಕಡ್ಡಾಯವಾಗಿ ಸಂದಾಯ ಮಾಡುವ ಜವಾಬ್ದಾರಿ ಆಯಾ ಮಹಾವಿದ್ಯಾಲಯದ ಪ್ರಾಂಶುಪಾಲರ ಹೊಣೆಯಾಗಿರುವುದು. ಒಂದು ವೇಳೆ ಸಂದಾಯ ಮಾಡದಿದ್ದಲ್ಲಿ ಇದನ್ನು ಆಯಾಕಾಲೇಜಿನ ಪ್ರಾಂಶುಪಾಲರಿಂದ ಭರಿಸಿಕೊಳ್ಳಲಾಗುವುದು.**

9) ಶುಲ್ಕ ವಿನಾಯತಿ ಪಡೆಯುವ ವಿದ್ಯಾರ್ಥಿಗಳ ವಿವರ ಪಟ್ಟಿಯ ಒಂದು ಪ್ರತಿಯನ್ನು ಹಣಕಾಸು ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು ಇವರಿಗೆ ಹಾಗೂ ಮತ್ತೊಂದು ಪ್ರತಿಯನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸಬೇಕು. ಶುಲ್ಕ ವಿನಾಯಿತಿ ಪಡೆಯುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಜಾತಿ ಪ್ರಮಾಣ ಪತ್ರವನ್ನು ಆಯಾ ತಹಶೀಲ್ದಾರರಿಂದ ಪಡೆದು ಪರೀಕ್ಷಾ ಅರ್ಜಿಯ ಮಾಹಿತಿಯ ಪಟ್ಟಿ ಜೊತೆಗೆ ಲಗತ್ತಿಸತಕ್ಕದ್ದು.

10) ಕಾಲೇಜಿನ ಪ್ರಾಂಶುಪಾಲರುಗಳು ವಿದ್ಯಾರ್ಥಿಗಳಿಂದ ಅರ್ಜಿತಪಾಸಣೆ ಶುಲ್ಕ ರೂ. 10/– ಅನ್ನು ಪಾವತಿಕೊಳ್ಳತಕ್ಕದ್ದು.

11) ವಿದ್ಯಾರ್ಥಿಗಳು ಪರೀಕ್ಷೆಯಲ್ಲಿತಮ್ಮ ಉತ್ತರಗಳನ್ನು ಕೇವಲ ಇಂಗ್ಲೀಷ್ ಇಲ್ಲವೆ ಕನ್ನಡ ಮಾಧ್ಯಮದಲ್ಲಿ ಮಾತ್ರ ಬರೆಯಲು ಅವಕಾಶವಿದೆ(ಇತರೆ ಭಾಷೆ ವಿಷಯಗಳಿಗೆ ಅನ್ವಯವಾಗುವುದಿಲ್ಲಾ). ಉಳಿದ ಭಾಷೆಗಳಲ್ಲಿ ಬರೆಯತಕ್ಕದ್ದಲ್ಲ ಎಂಬುದನ್ನು ಪ್ರಾಂಶುಪಾಲರು ವಿದ್ಯಾರ್ಥಿಗಳ ಗಮನಕ್ಕೆ ತರಬೇಕು. ವಿದ್ಯಾರ್ಥಿಗಳು ಇಂಗ್ಲೀಷ್ಇಲ್ಲವೆ ಕನ್ನಡ ಮಾಧ್ಯಮದಲ್ಲಿ ಬರೆಯದೇ ಬೇರೆ ಮಾಧ್ಯಮದಲ್ಲಿ ಬರೆದರೆ ಅಂತಹ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ಮೌಲ್ಯಮಾಪನವಾಗದೇ ಉಳಿಯುತ್ತವೆ. ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವನ್ನು ಅನೂರ್ಜಿತ ಗೊಳಿಸಲಾಗುವುದೆಂದು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಬೇಕು. ಇದು ಭಾಷಾ ವಿಷಯಗಳಿಗೆ ಅನ್ವಯವಾಗುವುದಿಲ್ಲ.

12) ಪ್ರಾಂಶುಪಾಲರು ತಮ್ಮ ಕಛೇರಿಯ ಸಿಬ್ಬಂದಿಗಳಿಗೆ ಈ ಅಧಿಸೂಚನೆಯಲ್ಲಿ ತಿಳಿಸಿದ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವ ಹೊಣೆಗಾರಿಗೆ ಅವರದ್ದಾಗಿದೆ ಎಂಬುದು ಮನವರಿಕೆ ಮಾಡಿಕೊಡಲು ಸೂಚಿಸಲಾಗಿದೆ.

13) ಪ್ರಾಂಶುಪಾಲರುಗಳು ಈ ಕೆಳಗೆ ನಮೂದಿಸಿದ ನಮೂನೆಯಲ್ಲಿ ವಿದ್ಯಾರ್ಥಿಗಳ ಮಾಹಿತಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು.

All P.G and P.G Diploma Courses

College Name:							
1	2	3	4	5	6	7	8
Sl.No.	Name of the Student	Register No.	Category	Demand	Collection	Balance	Remarks

ಸೂಚನೆ: ಮೇಲ್ಕಾಣಿಸಿದ ನಮೂನೆಯಲ್ಲಿ ಕಡ್ಡಯವಾಗಿ ಮಾಹಿತಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು

18/11/26

ಕುಲಸಚಿವರು (ಮೌಲ್ಯಮಾಪನ)
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು

ಗೆ,

ಎಲ್ಲಾ ಸ್ನಾತಕೋತ್ತರ(PG) ವಿಭಾಗಗಳ ಮುಖ್ಯಸ್ಥರು/ಸಂಯೋಜಕರು, ಮುಖ್ಯಆವರಣ ಹಾಗೂ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು ವ್ಯಾಪ್ತಿಯ ಸಂಲಗ್ನತೆ ಹೊಂದಿದ ಎಲ್ಲಾ **All P.G and P.G Diploma Courses** ಹೊಂದಿರುವ ಪದವಿ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರು ಅವರ ಆಪ್ತ ಸಹಾಯಕರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು
2. ನೋಡೆಲ್ ಅಧಿಕಾರಿಗಳು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು.
3. ಜಿಲ್ಲಾ ಸಮಾಜಕಲ್ಯಾಣ/ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆಗಳಿಗೆ, ರಾಯಚೂರು
4. ಹಣಕಾಸು ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು.
5. ಶೈಕ್ಷಣಿಕ ವಿಭಾಗ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು.
6. ಕಛೇರಿ ಪ್ರತಿ.